# ಜ್ಞಾನದ ಸಂರಚನೆ

- ಜ್ಞಾನ ಮತ್ತು ಸಮರ್ಥನೆ
- ಸಮರ್ಥನೆಯ ಸಮಸ್ಯಾತ್ಮಕ ಸ್ವರೂಪ
- ಅಗ್ರಿಪ  ಅವರ ತ್ರಿಸಂಧಿಗ್ಧ
- ಅನಂತತೆ
- ಸುಸಂಬದ್ಧತೆ
- ಮೂಲತತ್ತ್ವವಾದ

**ಜ್ಞಾನ ಮತ್ತು ಸಮರ್ಥನೆ**

ನೀವು ನಂಬುವಂತಹ ಹಲವು ನಂಬಿಕೆಗಳಲ್ಲಿ ಒಂದನ್ನು ಆಯ್ದುಕೊಳ್ಳಿ. ಉದಾಹರಣೆಗೆ, ಭೂಮಿಯು ಸೂರ್ಯನನ್ನು ಪರಿಭ್ರಮಿಸುತ್ತದೆಯೆ ಹೊರತು ಸೂರ್ಯ ಭೂಮಿಯಸುತ್ತ ಸುತ್ತುವುದಿಲ್ಲ ಎಂಬ ನಂಬಿಕೆಯನ್ನೆ ತೆಗೆದುಕೊಳ್ಳಿ. ಈ ವಿಷಯದ ಬಗೆಗೆ ನಿಮಗೆ  ಖಚಿತತೆ ಇದ್ದಲ್ಲಿ, ನೀವು ಈ ನಂಬಿಕೆಯು ಸಮರ್ಥನೀಯವಾದದ್ದೆಂದು ನಿಮ್ಮ ಅಂತರ್ಬೋಧೆಯ ಆದರಿಸಿ ಪರಿಗಣಿಸುತ್ತೀರಿ. ಈಗ ಈ  ನಂಬಿಕೆಗೆ ಸಮರ್ಥನೆ ಯಾವುದು ಎಂದು ನಿಮ್ಮನ್ನು ನೀವೇ ಪ್ರಶ್ನಿಸಿಕೊಳ್ಳಿ.

ಗೆಟಿಯರ್ ಪ್ರಕರಣಗಳ ಸಮರ್ಥನೆಯಷ್ಟೆ ಜ್ಞಾನಕ್ಕೆ ಸಾಕಾಗುವುದಿಲ್ಲ ಎಂಬುದನ್ನು ನಮಗೆ ತೋರಿಸಿದರೂ, ನಾವು ಮೂರನೆಯ ಅಧ್ಯಾಯದಲ್ಲಿ ನೋಡಿದಂತೆ, ಸಮರ್ಥನೆಯು ಜ್ಞಾನಕ್ಕೆ ಅಗತ್ಯವಾದ ಒಂದು ವಿಧಾನವೆಂದು ಭಾವಿಸುವುದು ಸಮಂಜಸವೆಂದು ತೋರುತ್ತದೆ.  ಹಾಗೆಯೇ, ಸಮರ್ಥನೆಯಲ್ಲಿ ಘಟಕವಾಗಿರುವ ಅಂಶಗಳಾವುವು ಎಂಬುದನ್ನು ಅರಿತುಕೊಳ್ಳುವುದು, ಜ್ಞಾನದ ಅಂಗಗಳನ್ನು ತಿಳಿದುಕೊಳ್ಳುವುದಕ್ಕೆ ಅಗತ್ಯವಾಗಿರುತ್ತದೆ. ಆದರೆ, ಸಮರ್ಥನೆಯ ಸ್ವರೂಪವನ್ನು ಸೂಚಿಸುವುದು ನಾವು ಇಲ್ಲಿ ನೋಡಲಿದ್ದೇವೆ.,

**ಸಮರ್ಥನೆಯ  ಸಮಸ್ಯಾತ್ಮಕ ಸ್ವರೂಪ**

ಭೂಮಿಯು ಸೂರ್ಯನ ಸುತ್ತ ಪರಿಭ್ರಮಿಸುತ್ತಿದೆ ಎಂಬ ನಿಮ್ಮ ನಂಬಿಕೆಗೆ ಸಮಂಜಸವೆನಿಸಬಹುದಾದ ಸಮರ್ಥನೆಯೆಂದರೆ ಇದಕ್ಕೆ ಯಾವುದೇ ಸಮರ್ಥನೆ ಇಲ್ಲ; ಈ ನಂಬಿಕೆಯನ್ನು ಎತ್ತಿ ಹಿಡಿಯುವುದಕ್ಕೆ ಹೆಚ್ಚಿನ ಬೆಂಬಲದ ಅಗತ್ಯವಿಲ್ಲ ಎಂಬುದಾಗಿದೆ. ಆದರೆ, ಎಲ್ಲ ಅಲ್ಲದಿದ್ದರೂ ಹೆಚ್ಚಿನ ನಂಬಿಕೆಗಳ ವಿಷಯದಲ್ಲಿ ಇಂತಹ  ಸಂಭವನೀಯತೆಯು ಅಷ್ಟು ಸಮಂಜಸವೆನಿಸುವುದಿಲ್ಲ.

ಒಬ್ಬ ವ್ಯಕ್ತಿಯ ನಂಬಿಕೆಗೆ ಒಂದು  ಮನೆಯ ರಚನೆಯನ್ನು  ಹೋಲಿಸೋಣ.  ಮನೆಗೆ ತಳಪಾಯವಿಲ್ಲದಿದ್ದರೆ ಅದು ಬಿದ್ದುಹೋಗುತ್ತದೆ. ಇದು ನಂಬಿಕೆಗೂ ಅನ್ವಯಿಸುತ್ತದೆ. ನಂಬಿಕೆಗೊಂದು ನಿಖರವಾದ ನೆಲೆಗಟ್ಟಿಲ್ಲದಿದ್ದರೆ, ಅಂದರೆ, ಈ ನಂಬಿಕೆಗೆ ಯಾವುದೇ ಸಮರ್ಥನೆ ಇಲ್ಲದಿದ್ದರೆ, ಆಧಾರವಿಲ್ಲದ ನಂಬಿಕೆಯು ಬಿದ್ದುಹೋಗುತ್ತದೆ. ಯಾವುದೇ ಆಧಾರಗಳಿಲ್ಲದಿರುವ ನಂಬಿಕೆಯನ್ನು ಎತ್ತಿ ಹಿಡಿಯುವುದು ಸಾಧ್ಯವಾಗಿದೆ ಎಂದರೆ ತರ್ಕಬದ್ಧವಾದ ಮತ್ತು ತರ್ಕರಹಿತ  ಮೂಲಗಳ ನಂಬಿಕೆಗಳ ನಡುವೆ ಜ್ಞಾನಾತ್ಮಕ ವ್ಯತ್ಯಾಸವನ್ನು ಗುರುತಿಸುವುದನ್ನು ಅದು ತಡೆಯುತ್ತದೆ.

ಉದಾಹರಣೆಗೆ, ಒಂದು ಮಗುವು ಯಾವುದೇ ಆಧಾರಗಳಿಲ್ಲದೆ ಚಂದ್ರನನ್ನು ಒಂದು ಗೋಲವೆಂದು ನಂಬುತ್ತಿದೆ ಎಂದು ಭಾವಿಸೋಣ. ಭೂಮಿಯು ಸೂರ್ಯನ ಸುತ್ತ ಪರಿಭ್ರಮಿಸುತ್ತದೆ ಎಂಬ ನಂಬಿಕೆಗೆ ಯಾವುದೇ ಆಧಾರಗಳಿಲ್ಲದಿದ್ದರೆ, ನಮ್ಮ ನಂಬಿಕೆಯು ಚಂದ್ರನ ವಿಷಯದಲ್ಲಿ ಮಗುವಿನ ನಂಬಿಕೆಗೆ ಸಾಮ್ಯತೆಯುಳ್ಳದ್ದಾಗುತ್ತದೆ. ಆದರೆ, ಮಗುವಿನ ನಂಬಿಕೆಗೆ ದೊರಕದ ಸಮರ್ಥನೆಯನ್ನು  ನಮ್ಮ ನಂಬಿಕೆ ಪಡೆದಿದೆ. ಆದುದರಿಂದ ಭೂಮಿಯು ಸೂರ್ಯನ ಸುತ್ತ ಪರಿಭ್ರಮಿಸುತ್ತದೆ ಎಂಬ ನಮ್ಮ ನಂಬಿಕೆ ಸತ್ಯವಾಗಿದೆ ಎಂಬುದು ಇಲ್ಲಿರುವ ವ್ಯತ್ಯಾಸವಲ್ಲ. ನಾವು ಅಧ್ಯಾಯ–3ರಲ್ಲಿ ನೋಡಿದಂತೆ ಸಮರ್ಥನೆ ಪಡೆದಿರುವ ವಿಷಯವು ಸತ್ಯವಾಗಿರಬೇಕಾಗಿಲ್ಲ. ಕೋಪರ್ನಿಕನ್ ರೆವಲ್ಯೂಷನ್ ಎಂಬ ಅಧ್ಯಯನ ಕ್ಷೇತ್ರದ ಒಂದು ಕ್ರಾಂತಿಯ ಮೂಲಕ  ಭೂಮಿಯು ಸೂರ್ಯನ ಸುತ್ತ ಪರಿಭ್ರಮಿಸುತ್ತಿದೆ ಎಂಬುವುದನ್ನು ಶೋಧಿಸುವ ಮೊದಲು ಎಂದರೆ ಸುಮಾರು ಒಂದು ಸಾವಿರ ವರ್ಷಗಳ ಹಿಂದೆ ವಾಸಿಸುತ್ತಿದ್ದ ಜನರು ಸೂರ್ಯನ ಸುತ್ತ ಭೂಮಿಯು ಸುತ್ತುತ್ತಿದೆ ಎಂಬುದನ್ನು ನಂಬುವುದಕ್ಕೆ ಖಂಡಿತವಾಗಿಯೂ ಸಮರ್ಥನೆಯನ್ನು ಹೊಂದಿದ್ದರು.

ಒಬ್ಬ ವ್ಯಕ್ತಿಯ ನಂಬಿಕೆಗೆ ಯಾವುದಾದರೊಂದು ವಿಧದ ಬೆಂಬಲ, ಕಾರಣ ಅಥವಾ ಆಧಾರ ಇರಬೇಕೆಂಬುವುದನ್ನು ಹೆಚ್ಚಿನ ಪ್ರಕರಣಗಳಲ್ಲಿ ಕಾಣುತ್ತದೆ. ಭೂಮಿಯು ಸೂರ್ಯನ ಸುತ್ತ ಪರಿಭ್ರಮಿಸುತ್ತಿದೆ ಎಂಬ ನಮ್ಮ ನಂಬಿಕೆಯ ವಿಷಯದಲ್ಲಿ, ವಿಜ್ಞಾನ ವಿಷಯದಲ್ಲಿ ತಜ್ಞರು ಬರೆದ ಪಠ್ಯಪುಸ್ತಕವನ್ನು ಓದಿರುವುದು ಈ ನಂಬಿಕೆಗೆ ಬೆಂಬಲ ನೀಡುತ್ತದೆ. ಎಂದರೆ, ಭೂಮಿಯು ಸೂರ್ಯನ ಸುತ್ತ ಸುತ್ತುತ್ತದೆ ಎಂಬ ನಮ್ಮ ನಂಬಿಕೆಯನ್ನು ನಂಬಲರ್ಹವಾದ ವಿಜ್ಞಾನದ ಪುಸ್ತಕಗಳಲ್ಲಿದೆ ಎಂಬ ಇನ್ನೊಂದು ನಂಬಿಕೆಯು ಬೆಂಬಲಿಸುತ್ತಿದೆ.

ಒಬ್ಬ ವ್ಯಕ್ತಿಯ ನಂಬಿಕೆಯನ್ನು ಇತರ ನಂಬಿಕೆಗಳ ಮೂಲಕ ಬೆಂಬಲಿಸುವುದರಲ್ಲಿರುವ ಸಮಸ್ಯೆ ಏನೆಂದರೆ, ಈ ನಂಬಿಕೆಗಳಿಗೆ ಆಧಾರ ಏನೆಂಬ ಪ್ರಶ್ನೆಯನ್ನು ಇದು ಹುಟ್ಟುಹಾಕುತ್ತದೆ. ನಿರಾಧಾರವಾಗಿರುವ ನಂಬಿಕೆಗಳಿಗೆ ಬೆಂಬಲ ನೀಡುವುದು ಪ್ರಾಥಮಿಕ ಹಂತದಲ್ಲಿ ಅಸಾಧ್ಯವೆಂದು ನಾವು ಈಗಾಗಲೇ ತೀರ್ಮಾನಿಸಿದ್ದೇವೆ. ಇದರ ಅರ್ಥ, ಬೆಂಬಲ ನೀಡುವ ಇತರ ನಂಬಿಕೆಗಳಿಗೆ ಮತ್ತಷ್ಟು ಬೆಂಬಲವನ್ನು ನೀಡಬೇಕಾಗುತ್ತದೆ. ಬೆಂಬಲಕ್ಕೆ ನೀಡಿರುವ ನಂಬಿಕೆಗಳೇ ಮೂಲ ನಂಬಿಕೆಯನ್ನು ಸಮರ್ಥಿಸುತ್ತವೆ ಎಂದು ನಂಬಿರುವಾಗ, ನಂಬಿಕೆಯ ಈ ಬೆಂಬಲಗಳಿಗೆ ಆಧಾರ ನೀಡುವ ವಿಷಯದಲ್ಲಿ ನಾವು ವಿಫಲರಾದರೆ, ಮೂಲ ನಂಬಿಕೆ ಹಾಗೂ ಅದಕ್ಕೆ ಬೆಂಬಲವನ್ನು ನೀಡುವ ನಂಬಿಕೆಗಳೆರಡಕ್ಕೂ ಸಮರ್ಥನೆ ಇಲ್ಲವಾಗುತ್ತವೆ. ವಿಜ್ಞಾನದ ಪಠ್ಯಪುಸ್ತಕಗಳು ಭೂಮಿಯು ಸೂರ್ಯನ ಸುತ್ತ ಪರಿಭ್ರಮಿಸುತ್ತದೆ ಎಂದು ಹೇಳುವುದರಿಂದ ನಾನು ಇದನ್ನು ನಂಬಿಕೊಂಡು, ವಿಜ್ಞಾನದ ಪಠ್ಯ ಪುಸ್ತಕ ಹೇಳಿದ ವಿಷಯನ್ನು ಸತ್ಯವೆಂದು ನಂಬಲು ಉತ್ತಮವಾದ ಕಾರಣವಿರದೇ ಇದ್ದಲ್ಲಿ, ಭೂಮಿಯು ಸೂರ್ಯನ ಸುತ್ತ ಪರಿಭ್ರಮಿಸುತ್ತದೆ ಎಂಬ ನನ್ನ ನಂಬಿಕೆಯು ಸೂಕ್ತವಾದ ಬೆಂಬಲವನ್ನು ಹೊಂದಿದೆ ಎಂದು ಪರಿಗಣಿಸುವುದು ಅಸಾಧ್ಯವಾಗುತ್ತದೆ. ನನ್ನ ನಂಬಿಕೆಗೆ ನಾನು ವಿಜ್ಞಾನದ ಪಠ್ಯಪುಸ್ತಕವನ್ನು ಎಷ್ಟೇ ಅವಲಂಬಿಸಿದರೂ, ಪಠ್ಯ ಪುಸ್ತಕದಲ್ಲಿರುವ ವಿಷಯಕ್ಕೆ ಬೆಂಬಲದ ಅಗತ್ಯವಿರುವುದರಿಂದ ಅದು ಹಿನ್ನಡೆಗೆ ಕಾರಣವಾಗುತ್ತದೆ. ಒಂದು ನಂಬಿಕೆಗೆ ಪರವಾಗಿ ಆಧಾರವನ್ನು ಕೊಡಲು ಆರಂಭಿಸಿದಾಗ, ಆ ಮೂಲ ನಂಬಿಕೆಗೆ ಸಾಕಷ್ಟು ಬೆಂಬಲ ಸಿಗದೇ ಅದು ಕುಸಿದುಹೋಗುವ ಭಯ ಇರುವುದರಿಂದ, ಆಧಾರಕ್ಕೆ ಕೊನೆಯಿಲ್ಲದಂತೆ ಬೆಂಬಲ ನೀಡುವ ಪ್ರಕ್ರಿಯೆಯು ಒಂದು ಅಸಹಾಯಕ ಸ್ಥಿತಿಯನ್ನು ಉಂಟುಮಾಡುತ್ತದೆ.

ಈ ವಿಷಯವನ್ನು ಮತ್ತಷ್ಟು ಸ್ಪಷ್ಟವಾಗಿ ತಿಳಿಯುವ ಉದ್ದೇಶದಿಂದ, ಮನಯ ಹೋಲಿಕೆಯ ವಿಷಯವನ್ನು ನೆನಪಿಸಿಕೊಳ್ಳಿ. ತಳಪಾಯ ಇಲ್ಲದಿರುವ ಮನೆ ಬಿದ್ದು ಹೋಗುತ್ತದೆಂಬುದನ್ನು ನಾವು ಈಗಾಗಲೇ ನೋಡಿದ್ದೇವೆ. ಆದರೆ, ಒಂದು ತಳಪಾಯದ ಆಧಾರಕ್ಕೆ ಎರಡನೇ ತಳಪಾಯ, ಅದಕ್ಕೆ ಮೂರನೇ ತಳಪಾಯ, ಅದಕ್ಕೆ ನಾಲ್ಕನೇ ತಳಪಾಯ ಮತ್ತು ಹೀಗೆ ಅನಿರ್ದಿಷ್ಟ ತಳಪಾಯಗಳಿದ್ದರೂ, ಮೇಲಿನ ತರ್ಕದ ಪ್ರಕಾರ, ಯಾವುದೇ ಪ್ರಯೋಜನವಾಗುವುದಿಲ್ಲ. ಕಟ್ಟಡವನ್ನು ಎತ್ತಿ ಹಿಡಿಯುವುದಕ್ಕೆ ಏನಾದರೂ ಇರಬೇಕು, ಹೀಗೆ ಇಲ್ಲದಿದ್ದರೆ ಮಿತಿ ಇಲ್ಲದೇ ಹಲವಾರು ತಳಪಾಯಗಳನ್ನು ಹಾಕಿಕಟ್ಟಿದರೂ, ಕಟ್ಟಡದ ಪತನವನ್ನು ತಡೆಯಲಾಗುವುದಿಲ್ಲ.

ವಾಸ್ತವಿಕ ಜೀವನದಲ್ಲಿ, ನಮ್ಮ ನಂಬಿಕೆಗಳನ್ನು ಕುರಿತು ಒಂದು ಹಂತದ ಅನಂತರ ಹೊಸ ಆಧಾರಗಳನ್ನು ನೀಡುವುದು ನಮಗೆ ಸಾಧ್ಯವಾಗುವುದಿಲ್ಲ. ನಂತರ ಹೊಸ ಆಧಾರಗಳನ್ನು ಸೂಚಿಸುವ ಬದಲು ಈಗಾಗಲೇ ಬಳಸಿಕೊಂಡಿರುವ ಆಧಾರಗಳನ್ನು ಪುನರಾವರ್ತಿಸುವ ಸಾಧ್ಯತೆಯೇ ಹೆಚ್ಚಾಗಿರುತ್ತದೆ. ಭೂಮಿಯು ಸೂರ್ಯನ ಸುತ್ತ ಪರಿಭ್ರಮಿಸುತ್ತಿದೆ ಎಂಬ ನಿಮ್ಮ ನಂಬಿಕೆಗೆ ಸಮರ್ಥನೆ ಯಾವುದು? ವಿಜ್ಞಾನ ಪುಸ್ತಕಗಳಲ್ಲಿ ಈ ವಿಷಯವು ಉಲ್ಲೇಖವಾಗಿರುವುದೇ ಸಮರ್ಥನೆ. ವಿಜ್ಞಾನ ಪುಸ್ತಕಗಳಲ್ಲಿ ಇರುವ ವಿಷಯಗಳನ್ನು ನಂಬಲು ಸಮರ್ಥನೆ ಏನಿದೆ? ಶಾಲೆಯಲ್ಲಿದ್ದಾಗ ನಿಮ್ಮ ಶಿಕ್ಷಕರು ಈ ಪುಸ್ತಕವು ಇಂತಹ ವಿಷಯಗಳಿಗೆ ಸೂಕ್ತ ಆಧಾರವೆಂಬುವುದನ್ನು ನಿಮಗೆ ಮನದಟ್ಟು ಮಾಡಿದ್ದರು. ನಿಮ್ಮ ವಿಜ್ಞಾನದ ಶಿಕ್ಷಕರ ಮಾತನ್ನು ನಂಬಲು ಸಮರ್ಥನೆ ಯಾವುದು? ಅವರ ಮಾತುಗಳು ಮತ್ತು ವಿಜ್ಞಾನ ಪುಸ್ತಕದಲ್ಲಿದ್ದ ಮಾತುಗಳನಡುವೆ ಇರುವ ಸಾಮ್ಯತೆಯೇ ಇದಕ್ಕೆ ಸಮರ್ಥನೆ. ಇಲ್ಲಿ ಸಮರ್ಥನೆಗಳನ್ನು ಬೆಂಬಲಿಸುವಂತಹ ಸಮರ್ಥನೆಗಳ ಒಂದು ಸಂಪೂರ್ಣ ಆವರ್ತವೇ ಇದೆ. ಈ ಹಿಂದೆ ಹೇಳಲಾಗಿದ್ದ ವಿಜ್ಞಾನ ಪುಸ್ತಕಗಳ ವಿಶ್ವಾಸಾರ್ಹತೆಯ ವಿಷಯವು ಈ ಸರಣಿಯ ಮೂಲದಲ್ಲಿ ಕಂಡುಬರುತ್ತಿದೆ. ಆ ಸಮರ್ಥನೆಗಳ ಪುನರಾವರ್ತನೆಯು ಹೆಚ್ಚಿನ ಮಹತ್ವವುಳ್ಳ ಸಮರ್ಥನೆ ಎಂದು ಎನಿಸಿಕೊಳ್ಳುವುದಿಲ್ಲ.

ಮನೆಯ ಹೋಲಿಕೆಯನ್ನು ಮತ್ತೊಮ್ಮೆ ನೆನಪಿಸಿಕೊಳ್ಳಿ. ಮನೆಯ ತಳಪಾಯವು ಬೇರೊಂದು ತಳಪಾಯವನ್ನು ಆಧರಿಸಿಕೊಂಡು ನಿಂತಿದೆ ಎಂದರೆ, ಆ ಮನೆ ಹೆಚ್ಚು ದಿನ ಸ್ಥಿರವಾಗಿರುವ ಸಾಧ್ಯತೆ ಕಡಿಮೆಯಾಗಿರುತ್ತದೆ. ಎಲ್ಲವನ್ನು ಎತ್ತಿ ಹಿಡಿಯಲು ಏನಾದರೂ ಬೇಕೇ ಬೇಕು, ಆದರೆ ಇಲ್ಲಿ ಯಾವುದೂ ಯಾವುದರಿಂದಲೂ ಎತ್ತಿ ಹಿಡಿಯಲ್ಪಟ್ಟಿಲ್ಲ!

## ಅಗ್ರಿಪರ ತ್ರಿಸಂದಿಗ್ಧ (Agrippa's Trilemma)

ನಮ್ಮ ನಂಬಿಕೆಗಳಿಗೆ ಸಮರ್ಥನೆ ಏನಾಗಿದೆ ಎಂಬ ವಿಷಯದಲ್ಲಿ ಮೂರು ಅತೃಪ್ತಕರ, ಅಹಿತಕರ ಪರ್ಯಾಯಗಳನ್ನು ನಾವಿಲ್ಲಿ ಎದುರಿಸಬೇಕಾಗಿ ಬಂದಿದೆ. ಅವು ಈ ಕೆಳಗಿನಂತಿವೆ:

೧. ನಮ್ಮ ನಂಬಿಕೆಗಳು ನಿರಾಧಾರವಾಗಿವೆ; ಅಥವಾ

೨. ನಮ್ಮ ನಂಬಿಕೆಗಳು ಕೊನೆಯಿಲ್ಲದಷ್ಟು ಸಂಖ್ಯೆಯ ಸಮರ್ಥನೆಗಳ ಸರಣಿಯ ಬೆಂಬಲವನ್ನು ಹೊಂದಿವೆ (ಎಂದರೆ, ಬೆಂಬಲಿಸುವ ಒಂದು ಸಮರ್ಥನೆಯು ಒಂದಕ್ಕಿಂತ ಹೆಚ್ಚು ಬಾರಿ ಕಂಡುಬರುವುದಿಲ್ಲ); ಅಥವಾ

೩.	ನಮ್ಮ ನಂಬಿಕೆಗಳು ಪುನರಾವರ್ತನೆಯಯಾಗುತ್ತಿರುವ ಸಮರ್ಥನೆಯನ್ನು ಹೊಂದಿವೆ (ಎಂದರೆ, ಬೆಂಬಲಿಸುವಂತಹ ಸಮರ್ಥನೆಯು ಒಂದಕ್ಕಿಂತ ಹೆಚ್ಚು ಬಾರಿ ಸೂಚಿತವಾಗುತ್ತದೆ).

ನಮ್ಮ ಮೂಲ ನಂಬಿಕೆಯನ್ನು ಎತ್ತಿಹಿಡಿಯುವ ವಿಷಯದಲ್ಲಿ ನಾವು ಸಮರ್ಥರಾಗಿಲ್ಲ ಎಂಬುವುದನ್ನು ಸೂಚಿಸುವಂತೆ ಇರುವುದರಿಂದ ಈ ಎಲ್ಲಾ ಪರ್ಯಾಯಗಳನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ತಳಪಾಯವಿಲ್ಲದ ಮನೆ, ಅನಂತ ತಳಪಾಯಗಳುಳ್ಳ ಮನೆ ಅಥವಾ ಪುನರಾವೃತ್ತಿಯಾಗುವ ತಳಪಾಯವುಳ್ಳ ಮನೆ ಸರಿಯಾದ ಆಧಾರವಿಲ್ಲದ ಕಾರಣ ಬಿದ್ದು ಹೋಗುವಂತೆ, ಆಧಾರವಿಲ್ಲದ ನಂಬಿಕೆ (ಆಯ್ಕೆ ೧), ಅನಂತ ತಳಪಾಯಗಳ ಸರಪಣಿಯನ್ನುಳ್ಳ ನಂಬಿಕೆ (ಆಯ್ಕೆ ೨) ಅಥವಾ ಪುನರಾವೃತ್ತಿಗೊಳ್ಳುವ ತಳಪಾಯಗಳನ್ನುಳ್ಳ ನಂಬಿಕೆ (ಆಯ್ಕೆ ೩), – ಇವು ಯಾವುದೂ ಸಮರ್ಥನೀಯವಾಗುವುದಿಲ್ಲ.

ಊ ಸನರ್ಥನೆಯ ರಚನೆಯಲ್ಲಿರುವಸಮಸ್ಯೆಗೆ, ಅಗ್ರಿಪ ಎಂಬ ಪ್ರಾಚೀನ ಗ್ರೀಕ್ ತತ್ತ್ವಜ್ಞಾನಿಯ ಹೆಸರನ್ನೇ ನೀಡಲಾಗಿದೆ. ಸಾಮಾನ್ಯವಾಗಿ ಹೇಳುವ ಇಮ್ಮೊನೆಯ ಸಂದಿಗ್ಧದಲ್ಲಿ ಇರುವಂತೆ, ಇದರಲ್ಲಿ ಎರಡರ ಬದಲು ಮೂರು ಅಹಿತಕರವಾದ ಆಯ್ಕೆಗಳಿರುತ್ತವೆ.. ಈ ಒಗಟಿನ ಪ್ರಯೋಜನವೆಂದರೆ, ತ್ರಿಸಂಧಿಗ್ಧದಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಜ್ಞಾನರಚನೆಯ ವಿವಿಧ ವಿಧಾನಗಳ ಮೇಲೆ ನಮ್ಮ ಗಮನವನ್ನು ಇದು ಕೇಂದ್ರೀಕರಿಸುತ್ತದೆ. ಮೂರು ನಿರ್ದಿಷ್ಟ ವಿಧದ ಜ್ಞಾನಮೀಮಾಂಸಾ ಸಿದ್ಧಾಂತಗಳು ಇಲ್ಲಿ ಸೂಚಿತವಾಗುತ್ತವೆ.

ಅನಂತತೆ ( Infinitism)

ಅಗ್ರಿಪರ ತ್ರಿಸಂಧಿಗ್ಧದ ಕನಿಷ್ಠ ಸಮಂಜಸತೆಯುಳ್ಳ (ಅದೇ ಕಾರಣದಿಂದ, ಐತಿಹಾಸಿಕವಾಗಿ ಪ್ರಸಿದ್ಧಿ ಪಡೆಯದಿರದ) ಪ್ರತಿಕ್ರಿಯೆಯೆಂದರೆ ಎರಡನೆಯ ಆಯ್ಕೆಯನ್ನು ಸ್ವೀಕರಿಸಿ, ಸಮರ್ಥನೆಗಳ ಅನಂತ ಸರಣಿಯು ಒಂದು ನಂಬಿಕೆಯನ್ನು ಬೆಂಬಲಿಸುತ್ತದೆ ಎಂಬುದನ್ನು ಎತ್ತಿ ಹಿಡಿಯುವುದು. ಇದನ್ನು ಅನಂತತೆ ಎಂದು ಕರೆಯುತ್ತಾರೆ. ಈ ಆಯ್ಕೆಯು ಸಮರ್ಥನೀಯವಾಗಿಲ್ಲ ಏಕೆಂದರೆ, ಒಂದು ಮನೆಗೆ ತಳಪಾಯಗಳ ಸರಣಿ ಆಧಾರ ನೀಡುವುದರಲ್ಲಿ ವಿಫಲವಾಗುವ ಹಾಗೆಯೇ, ಒಂದು ನಂಬಿಕೆಗೆ ಸಮರ್ಥನೆಗಳ ಅನಂತ ಸರಣಿಯು ಹೇಗೆ ಬೆಂಬಲನೀಡಬಲ್ಲದು ಎಂಬುದು ಸ್ಪಷ್ಟವಾಗುವುದಿಲ್ಲ. ಆದರೂ, ಈ ದೃಷ್ಟಿಯನ್ನು ಕೆಲವರು ಸಮರ್ಥಿಸುತ್ತಾರೆ. ಈ ಸಿದ್ಧಾಂತವನ್ನು ಮುಂದಿಡುವವರು ಕೇವಲ ವಿವೇಚನಾರಹಿತವಾದ ಅಂತಃಪ್ರಜ್ಞೆಯನ್ನು ವಿರೋಧಿಸುವುದನ್ನು ಹೊರತುಪಡಿಸಿದರೆ ಸಮರ್ಥನೆಗಳ ಅನಂತ ಸರಣಿಯು ಏಕೆ ಸಮರ್ಥನೀಯವಾಗದು ಎಂಬುವುದು ಸ್ಪಷ್ಟವಾಗಬಾರದು ಎಂದು ವಾದಿಸುತ್ತಾರೆ.

ಸ್ಥಳಾಭಾವದ ಕಾರಣದಿಂದ ಈ ಸಿದ್ಧಾಂತವನ್ನು ಇಲ್ಲಿ ವಿವರವಾಗಿ ಚರ್ಚಿಸಲಾಗುವುದಿಲ್ಲ. ಆದರೆ, ಸಮರ್ಥನೆಯನ್ನು ಕುರಿತು, ಜ್ಞಾನವನ್ನು ಕುರಿತು ಇರುವ, ಐತಿಹಾಸಿಕವಾಗಿ ಪ್ರಸಿದ್ಧವಾಗಿರುವ ಎರಡು ಸಿದ್ಧಾಂತಗಳನ್ನು ಇಲ್ಲಿ ಗಮನಿಸಲಿದ್ದೇವೆ.

**********************

ಅಗ್ರಿಪ (ಸುಮಾರು ಕ್ರಿ.ಶ.೧೦೦)

ಪಿರೊನಿಯನ್ ಸಂದೇಹವಾದಿ, ತನ್ನದೇ ವಿಧದ ಪ್ರೇಮಿ, ತನ್ನ ಶಕ್ತಿಗನುಸಾರವಾಗಿ, ಶಾಸ್ತ್ರಾಂಧರ (dogmatists) ಅಹಂಭಾವ ಮತ್ತು ಒರಟುತನವನ್ನು ಮಾತಿನ ಮೂಲಕ ಗುಣಪಡಿಸಲು ಇಚ್ಛಿಸುವವನು.

–ಸೆಕ್ಸಸ್ ಎಂಪಿರಿಕಸ್, ಔಟ್ಲೈನ್ಸ್ ಆಫ್ ಪಿರೋನಿಸ್ಮ್.

ಅಗ್ರಿಪರು ಪಿರೊನಿಯನ್ ಸಂದೇಹವಾದಿ ಎಂಬ ಪ್ರಾಚೀನ ಗ್ರೀಕ್ ತತ್ತ್ವಜ್ಞಾನಿಗಳ ಗುಂಪಿಗೆ ಸೇರಿದವರಾಗಿದ್ದರು. ಇವರ ಬಗ್ಗೆ ಹೆಚ್ಚೇನೂ ತಿಳಿದಿಲ್ಲ. ಏಕೆಂದರೆ, ಇತರ ಪಿರೊನಿಯನ್ ಸಂದೇಹವಾದಿಗಳಂತೆಯೇ ಅವರೂ ತಾವಾಗಿಯೇ ಏನನ್ನೂ ಬರೆದಿಲ್ಲವೆಂದು ಕಾಣಿಸುತ್ತದೆ.. ಇದಕ್ಕೆ ಕಾರಣವೇನೆಂದರೆ, ಈ ತತ್ತ್ವಜ್ಞರ ಮೂಲತತ್ತ್ವದ ಪ್ರಕಾರ ಎಂದಿಗೂ ಏನನ್ನೂ ಪ್ರತಿಪಾದಿಸಬಾರದು. ಮುಂದಿನ ಪೀಳಿಗೆಯವರಿಗಾಗಿ ತಮ್ಮ ತಾತ್ತ್ವಿಕ ದೃಷ್ಟಿಕೋನಗಳನ್ನು ಬರೆದಿಡುವ ಅಗತ್ಯವಿಲ್ಲ ಎಂಬುದು ವರ ಅಭಿಪ್ರಾಯವಾಗಿತ್ತು. ಪ್ರಾಚೀನ ಗ್ರೀಕ್ ಇತಿಹಾಸತಜ್ಞರಾಗಿದ್ದ ಡಿಯೋಜೆನಿಸ್ ಲಿಯೆರ್ಟಿಯಸ್ (ಸುಮಾರು ಕ್ರಿ.ಶ.೨೫೦) ತಮ್ಮ ಗ್ರೀಕ್ ತತ್ತ್ವಶಾಸ್ತ್ರದ ಇತಿಹಾಸದಲ್ಲಿ ಟ್ರೈಲೆಮ್ಮ ವಿಷಯದಲ್ಲಿ ಅಗ್ರಿಪರನ್ನು ಕುರಿತು ನೀಡಿರುವ ಮಾಹಿತಿಯಿಂದಷ್ಟೇ ನಮಗೆ ಅಗ್ರಿಪರ ಬಗೆಗೆ ತಿಳಿದುಬರುತ್ತದೆ. ಇಂದು ಮೂಲವಾಗಿದೆ. ಪಿರೊನಿಯನ್ ಸಂದೇಹವಾದಿಗಳನ್ನು ಕುರಿತು ಇರುವ ನಮ್ಮ ತಿಳುವಳಿಕೆಗೆ ಆಧಾರ ಸೆಕ್ಸ್‌ಟಸ್ ಎಂಪೆರಿಕಸ್ (ಸುಮಾರು ಕ್ರಿ.ಶ.೨೦೦) ಬರೆದ ಔಟ್ಲೈನ್ಸ್ ಆಫ್ ಪಿರೊನಿಸಮ್‌ನಂತೆಯೇ ಈ ಗ್ರಂಥದಲ್ಲಿಯೂ ಅಗ್ರಿಪರ ಸಂದೇಹವಾದದ ಕಾರ್ಯತಂತ್ರವನ್ನು ಸಂದೇಹ ಮೂಡಿಸುವ ಉದ್ದೇಶದಿಂದಲೇ ಐದು ಸಂದೇಹವಾದದ ಕಾರ್ಯತಂತ್ರದ ರೂಪದಲ್ಲಿ ಉಲ್ಲೇಖಿಸಲಾಗಿದೆ. ಇದರಲ್ಲಿರುವ ಮೂರು ಕಾರ್ಯತಂತ್ರಗಳು ಸಂದೇಹವಾದಕ್ಕೆ ಮುಖ್ಯ ಬೆದರಿಕೆಯಾಗಿದ್ದರೂ, ಅಗ್ರಿಪರ ಸಂದೇಹವಾದದ ಸವಾಲನ್ನು ಅದರ ರೀತಿಯಲ್ಲಿಯೇತಿಳಿದುಕೊಳ್ಳುವುದು ಸಾಧ್ಯವಾಗಿದೆ. ಇದರ ಪರಿಣಾಮವಾಗಿ ನಮಗಿಂದು ಇಲ್ಲಿ ವಿವರಿಸಿದ ರೀತಿಯಲ್ಲಿ ಅಗ್ರಿಪರ ತ್ರಿಸಂದಿಗ್ಧವನ್ನು ಪಡೆಯುವುದು ಸಾಧ್ಯವಾಯಿತು.

********************************

ಸುಸಂಬದ್ಧತೆ (Coherentism)

ಅಗ್ರಿಪರ ತ್ರಿಸಂದಿಗ್ಧತೆಗೆ ಮತ್ತಷ್ಟು ಸಮಂಜಸವಾದ (ಮತ್ತು ಪ್ರಸಿದ್ಧವಾದ) ಪ್ರತಿಕ್ರಿಯೆಯನ್ನು ಮೂರನೆಯ ಆಯ್ಕೆಯಲ್ಲಿ ಕಾಣಬಹುದಾಗಿದೆ. ಇಲ್ಲಿ ಒಂದು ನಂಬಿಕೆಯನ್ನು ಬೆಂಬಲಗಳ ಆವೃತ್ತದ ಸರಪಳಿಯು ಸಮರ್ಥಿಸುತ್ತದೆ ಎಂದು ತೋರಿಸಲಾಗಿದೆ. ಇದನ್ನು ಸುಸಂಬದ್ಧತೆ (Coherentism) ಎಂದು ಕರೆಯಲಾಗಿದೆ. ಬೆಂಬಲವನ್ನು ಸೂಚಿಸಲು ಈ ಬೆಂಬಲದ 'ಪುನರಾವೃತ್ತಿಯ ಸರಣಿಯು ಸಾಕಷ್ಟು ದೊಡ್ಡದಾಗಿರಬೇಕು ಮತ್ತು ಸಣ್ಣ ಸರಣಿಯ ಬೆಂಬಲಗಳು ಸಮರ್ಥನೆಯನ್ನು ನೀಡುವುದಿಲ್ಲ ಎಂದು ಇಲ್ಲಿ ಅರ್ಥಮಾಡಿಕೊಳ್ಳಲಾಗುತ್ತದೆ. ಆದರೂ ಪುನರಾವೃತ್ತಿಗೊಳ್ಳುವ ಸರಣಿಯು ಎಷ್ಟು ದೊಡ್ಡದಿದ್ದರೂ ಒಂದು ನಂಬಿಕೆಯನ್ನು ಸಮರ್ಥಿಸಲಾರದು ಎಂಬ ಸಾಮಾನ್ಯ ತಿಳುವಳಿಕೆಯೊಂದಿಗೆ ಸುಸಂಬದ್ಧತೆಯನ್ನು ಸಮನ್ವಯಿಸುವುದು ಸಾಮಾನ್ಯವಾಗಿ ಕಷ್ಟವೇ ಆಗಿದೆ.

********************************

ಡಬ್ಲ್ಯೂ.ವಿ.ಓ. ಕ್ವೈನ್- (W. V. O. Quine) (1908-2000)

ಯಾವುದೇ ಹೇಳಿಕೆಯು ಪರಿಷರಣೆಯಿಂದ ಸುರಕ್ಷಿತವಾಗಿರುವುದಿಲ್ಲ.

ಕ್ವೈನ್, 'ಟು ಡಾಗ್ಮಾಸ್ ಆಫ್ ಎಂಪಿರಿಸಿಸಮ್.

ಅಮೇರಿಕದ ತತ್ತ್ವಶಾಸ್ತ್ರಜ್ಞರಾದ ವಿಲ್ಲಾರ್ಡ್ ವಾನ್ ಓರ್ಮನ್ ಕ್ವೈನ್ ಅವರು ಇಪ್ಪತ್ತನೆಯ ಶತಮಾನದ ಸುಪ್ರಸಿದ್ಧ ತತ್ತ್ವಜ್ಞಾನಿಗಳಲ್ಲಿ ಒಬ್ಬರಾಗಿದ್ದರು. ಅವರ ಮಾರ್ಗದರ್ಶಕವೆನಿಸಿದ ವಿಷಯವೆಂದರೆ , ಡ ಕಾರ್ತ್‌ರವರ 'ಪ್ರಥಮ' ದರ್ಶನ (First philosophy) ಎಂದು ಕರೆಯಲ್ಪಟ್ಟಿದ್ದ ಸಿದ್ಧಾಂತದ ತಿರಸ್ಕಾರ. 'ಪ್ರಥಮ' ದರ್ಶನವನ್ನು ವೈಜ್ಞಾನಿಕ ಸಂಶೋಧನೆಗೆ ಮುಂಚಿತವಾಗಿದ್ದ, ವೈಜ್ಞಾನಿಕ ಸಂಶೋಧನೆಯಿಂದ ಸ್ವತಂತ್ರವಾಗಿದ್ದ ಮತ್ತು ಇದರಿಂದಲೇ ವಿಜ್ಞಾನದ ಮೌಲ್ಯಮಾಪನ ಸಾಧ್ಯವಾಗಿದ್ದ ಒಂದು ದೃಷ್ಟಿಕೋನವೆಂದು ಅರ್ಥಮಾಡಿಕೊಳ್ಳಲಾಗಿತ್ತು. ಕ್ವೈನ್ ಇಂತಹ ವಾದವನ್ನು, ಭವಿಷ್ಯದ ವಿಜ್ಞಾನದ ಮೂಲಕ ಬದಲಿಸಲು ಆಗದ ತಾತ್ವಿಕತೆಯ ಅಸ್ತಿತ್ವದ ಸಾಧ್ಯತೆಯನ್ನು, ನಿರಾಕರಿಸಿದ್ದರು.

ಇಂತಹ ಅಭಿಪ್ರಾಯವು ಸಹಜವಾಗಿ ಸುಸಂಬದ್ಧತೆಯೊಂದಿಗೆ ಸಾಗುತ್ತದೆ. ಇಲ್ಲಿ ಯಾವುದೇ ನಂಬಿಕೆಯ ಜ್ಞಾನಯುಕ್ತ ಆಧಾರವು ಅದರ ಎಲ್ಲಾ ನಂಬಿಕೆಗಳ ಜಾಲವನ್ನು ಆಧರಿಸಿರುತ್ತದೆ ಮತ್ತು ಯಾವುದೇ ಜ್ಞಾನಯುಕ್ತ ನಂಬಿಕೆಯು ಬೇರೊಂದು ನಂಬಿಕೆಯಿಂದ ಪ್ರತ್ಯೇಕವಾಗಿರುವುದಿಲ್ಲ.

ಸುಸಂಬದ್ಧತೆಯ ಕ್ಷೇತ್ರಕ್ಕೆ ಅಷ್ಟೇ ಅಲ್ಲದೆ ಕ್ವೈನ್ ಅವರು ತರ್ಕವಾತಿ ತತ್ತ್ವಶಾಸ್ತ್ರ, ಭಾಷಾ ತತ್ತ್ವಶಾಸ್ತ್ರ, ಆಧ್ಯಾತ್ಮ ಮತ್ತು ಸತ್ಯದ ದರ್ಶನಶಾಸ್ತ್ರಗಳ ಕ್ಷೇತ್ರದಲ್ಲಿಯೂ ಸಾಕಷ್ಟು ಕೊಡುಗೆಗಳನ್ನು ನೀಡಿದ್ದಾರೆ.

******************************

ಸುಸಂಬದ್ಧತೆಯ ಪ್ರೇರಣೆಯ ಒಂದು ಭಾಗವು ಸ್ವಲ್ಪ ಮಟ್ಟಿಗೆ ಪ್ರಾಯೋಗಿಕವೂ ಆಗಿದೆ. ಇಲ್ಲಿ ಸುಸಂಬದ್ಧತೆಯ ಸಿದ್ಧಾಂತವನ್ನು ಅನುಸರಿಸುವವರು ಹೇಳುವುದೇನೆಂದರೆ, ಅವರ ವಿವರಣೆಯಂತೆಯೇ ನಮ್ಮ ನಂಬಿಕೆಗಳನ್ನು ನಾವು ಸಮರ್ಥಿಸುತ್ತೇವೆ. ಯಾವುದೇ ಸಿದ್ಧಾಂತದ ನಂಬಿಕೆ ನಮ್ಮ ಇತರ ನಂಬಿಕೆಗಳನ್ನು ಆಧರಿಸಿದ ಒಂದು ಸಾಮಾನ್ಯವಾದ ಜಾಲವನ್ನು ಸೂಚ್ಯವಾಗಿ ಒಳಕೊಂಡಿರುತ್ತದೆ. ಈ ಚಿಂತನೆಯನ್ನು ಈ ಕೆಳಗಿನ ರೀತಿಯಲ್ಲಿ ಹೀಗೆ ಹೇಳಬಹುದು, ನಮ್ಮ ನಂಬಿಕೆಗಳು ನಮ್ಮ ಸಾಮಾನ್ಯವಾದ ವಿಶ್ವದೃಷ್ಟಿಯ ಒಂದು ಪ್ರತಿಬಿಂಬವೇ ಆಗಿರುತ್ತವೆ. ವಿಶ್ವದೃಷ್ಟಿಯ ಪರಿಣಾಮವಾಗಿ ಈ ಜಗತ್ತಿನಲ್ಲಿ ನನಗೆ ಅನುಭವಗಳು ಉಂಟಾಗುತ್ತವೆ ಮತ್ತು ಈ ಅಭಿಪ್ರಾಯದಿಂದಾಗಿಯೇ ನಾನು ಸ್ವಾಭಾವಿಕವಾಗಿ ಈ ಜಗತ್ತಿನ ಕುರಿತು ನಂಬಿಕೆಗಳನ್ನು ಹೊಂದುತ್ತೇನೆ.

ಉದಾಹರಣೆಗೆ, ನನ್ನ ಮತ್ತು ನೂರು ವರ್ಷಗಳ ಹಿಂದೆ ಬದುಕಿದ್ದ ಮತ್ತು ಇಂದಿಗೂ ಸೂರ್ಯನೇ ಭೂಮಿಯನ್ನು ಪರಿಭ್ರಮಿಸುತ್ತದೆ ಹೊರತು ಭೂಮಿ ಸೂರ್ಯನನ್ನು ಪರಿಭ್ರಮಿಸುವುದಿಲ್ಲ ಎಂಬ ನಂಬಿಕೆ ಉಳ್ಳ ಒಬ್ಬ ವ್ಯಕ್ತಿಯ ನಡುವಿನ ವ್ಯತ್ಯಾಸವನ್ನು ಗಮನಿಸಿ. ಆ ವ್ಯಕ್ತಿಯ ವಿಶ್ವದೃಷ್ಟಿಯನುಸಾರ, ಪ್ರತಿದಿನ ಬೆಳಗ್ಗೆ ಸೂರ್ಯನು ಉದಯಿಸುವುದನ್ನು ನೋಡುವುದರಿಂದ, ಭೂಮಿಯೇ ಸೂರ್ಯನ ಪಥದ ಕೇಂದ್ರವೆಂದು ಆ ವ್ಯಕ್ತಿಯು ನಂಬಿರುತ್ತಾನೆ. ಇದಕ್ಕೆ ವಿರುದ್ಧವಾಗಿ, ಇಂದಿನ ದಿನದ ನನ್ನಂತಹ ವ್ಯಕ್ತಿಯು ಭೂಮಿಯೇ ಸೂರ್ಯನನ್ನು ಪರಿಭ್ರಮಿಸುತ್ತಿದೆ ಎಂದು ತಿಳಿದಿರುವುದರಿಂದ ಬೆಳಗಿನ ಸೂರ್ಯೋದಯನ್ನು ಆ ವ್ಯಕ್ತಿಯ ಕಲ್ಪನೆಯಂತೆ ಪರಿಗಣಿಸುವುದಿಲ್ಲ. ನಮ್ಮಲ್ಲಿ ಪ್ರತಿಯೊಬ್ಬರೂ ಭಿನ್ನಭಿನ್ನವಾದ ವಿಶ್ವನೋಟಗಳನ್ನು ಹೊಂದಿದ್ದು ನಮ್ಮ ವಿಶ್ವದೃಷ್ಟಿ ನಾವು ಸ್ವಾಭಾವಿಕವಾಗಿ ಹೊಂದುವ ನಂಬಿಕೆಗಳನ್ನು ರೂಪಿಸುತ್ತದೆ. ಕೋಪರ್ನಿಕನ್ ಕ್ರಾಂತಿಗಿಂತ ಹಿಂದಿನ ಕಾಲದಲ್ಲಿದ್ದವರು ತಪ್ಪು ಕಲ್ಪನೆಗಳನ್ನು ಹೊಂದಿದ್ದರೂ, ಅವರ ನಂಬಿಕೆಗಳ ಮೂಲ ಆಧಾರವೇ ಅವರ ಎಲ್ಲಾ ನಂಬಿಕೆಗಳಿಗೆ ಕಾರಣವೆನ್ನುವುದನ್ನು ಇಲ್ಲಿ ಗಮನಿಸಬೇಕು. ಅವನು ಹೊಂದಿರುವ ವಿಶ್ವದೃಷ್ಟಿಯು ಅವನ ನಂಬಿಕೆಯನ್ನು ಬೆಂಬಲಿಸುವುದರಿಂದ ಮತ್ತು ನಂಬಿಕೆಗಳ ಜಾಲವು ಅವನ ದೃಷ್ಟಿಯ ವಿಶ್ವದೃಷ್ಟಿಯನ್ನು ರೂಪಿಸಿರುವುದರಿಂದ ಬೆಳಗಿನ ಹೊತ್ತಿನಲ್ಲಿ ಸಂಭವಿಸುವ ಸೂರ್ಯೋದಯವು ಸೂರ್ಯನು ಭೂಮಿಯ ಸುತ್ತ ಸುತ್ತುತ್ತಾನೆ ಎಂಬ ಅವನ ನಂಬಿಕೆಗೆ ಆಧಾರವಾಗುತ್ತದೆ.

ನಮ್ಮ ದೃಷ್ಟಿಗೆ ಒಪ್ಪಿತವಾಗುವ ವಿಶ್ವದೃಷ್ಟಿಯನ್ನು ಆಧರಿಸಿದ ಸ್ಪಷ್ಟವಾದ ನಿರ್ದೇಶನಗಳ ಮೂಲಕ ರೂಪುಗೊಂಡ ನಂಬಿಕೆಗಳ ಜಾಲವೇ ನಮ್ಮ ನಂಬಿಕೆಗಳನ್ನು ರೂಪಿಸುವುದೇ ಆಗಿದ್ದರೂ ಇದು ಸರಿಯಾದ ವಿಧಾನ ಆಗಿರಬೇಕೆಂದೇನಿಲ್ಲ. ನಮ್ಮ ನಂಬಿಕೆಗಳನ್ನು ರೂಪಿಸುವಾಗ ನಾವು ಜಾಗರೂಕರಾಗಿರುವುದಿಲ್ಲ. ಯಾವುದಾದರೊಂದು ನಿರ್ದಿಷ್ಟವಾದ ವಿಶ್ವದೃಷ್ಟಿಯನ್ನು ಸತ್ಯವೆಂದು ಹಗುರವಾಗಿ ಸ್ವೀಕರಿಸುವ ಕ್ರಿಯೆಯು ನಮ್ಮ ಅಜಾಗ್ರತೆಯನ್ನು ಪ್ರತಿಬಿಂಬಿಸುತ್ತದೆ. ಕೋಪರ್ನಿಕಸ್ ಕ್ರಾಂತಿಗೆ ಮುಂಚಿತವಾಗಿ ಹೊಂದಿದ್ದ ಚಿತ್ರಣವನ್ನು ತೊರೆದು ಭೂಮಿ–ಸೂರ್ಯರ ನಡುವಿನ ಸಂಬಂಧವನ್ನು ಒಪ್ಪಿಕೊಳ್ಳಲು ಜನರು ಸಾಕಷ್ಟು ಕಾಲವನ್ನೇ ತೆಗೆದುಕೊಂಡಿದ್ದಾರೆ. ತಮಗಿರುವ ವಿಶ್ವದೃಷ್ಟಿಯನ್ನು ಮತ್ತು ಈ ವಿಶ್ವದೃಷ್ಟಿಯನ್ನು ಆಧರಿಸಿ ತಮ್ಮಲ್ಲಿ ಮೂಡುವ ನಂಬಿಕೆಗಳನ್ನು ನಿರ್ಣಾಯಕವಾಗಿ ಪರಿಗಣಿಸಿದ್ದರೆ, ಭೂಮಿ–ಸೂರ್ಯರ ಸಂಬಂಧದ ಸರಿಯಾದ ಚಿತ್ರಣವನ್ನು ಬಹಳ ಬೇಗನೇ ತಿಳಿದುಕೊಳ್ಳಬಹುದಾಗಿತ್ತು. ಒಂದು ನಿರ್ದಿಷ್ಟವಾದ ನಂಬಿಕೆಯನ್ನು ರೂಪಿಸಿಕೊಳ್ಳುವುದು ಸಾಧ್ಯವಿದೆ ಎಂದ ಮಾತ್ರಕ್ಕೆ ಒಂದೇ ವಿಧದಲ್ಲಿ ನಾವೆಲ್ಲರೂ ನಂಬಿಕೆಗಳನ್ನು ರೂಪಿಸಿಕೊಳ್ಳಬೇಕೆಂದೇನಿಲ್ಲ.

ಸುಸಂಬದ್ಧತೆಯ ಪ್ರೇರಣೆಯು ಕೇವಲ ಕಾರ್ಯಸಾಧ್ಯವಾಗಿರುವುದಿಲ್ಲ. ಪರ್ಯಾಯ ಸಿದ್ಧಾಂತಗಳು ಅಸಮಂಜಸವಾಗಿರುವ ಅಂಶವು ಈ ವಿವರಣೆಯ ಭಾಗವಾಗಿರುವುದರಿಂದ ಸಮರ್ಥನೆಯನ್ನು ಇದೇ ರೀತಿಯಲ್ಲಿ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಅನಂತತೆಯು ಅಂತರ್ದೃಷ್ಟಿ ಇಲ್ಲದ್ದೆಂದು ಈಗಾಗಲೇ ನೋಡಿದ್ದೇವೆ (ಆದರೆ ಅನಂತತೆಯು ಸುಳ್ಳೆಂದು ಅಲ್ಲ). ಇನ್ನು ನಾವು ಐತಿಹಾಸಿಕವಾಗಿ ಸುಪ್ರಸಿದ್ಧವಾದ ಹಾಗೂ ಲಭ್ಯವಿರುವ ಮೂರನೆಯ ಆಯ್ಕೆಯನ್ನು ಪರಿಗಣಿಸುವುದೊಂದು ಉಳಿದಿದೆ.

## ಮೂಲತತ್ತ್ವವಾದ (Foundationalism)

ಮೂರನೆಯ ಆಯ್ಕೆಯು ಮೂಲತತ್ತ್ವವಾಗಿದೆ. ಇದು ಮೊದಲನೆಯ ಆಯ್ಕೆಗೆ ಸರಿಹೊಂದುತ್ತದೆ. ಒಂದು ನಂಬಿಕೆಯು ಇತರ ನಂಬಿಕೆಗಳ ಬೆಂಬಲವಿಲ್ಲದೆಯೂ ಸಮರ್ಥನೀಯವಾಗಿರುತ್ತದೆ ಎಂಬ ಅಭಿಪ್ರಾಯವನ್ನು ಸ್ವೀಕರಿಸುವ ಮೂಲಕ ಇದು ಅಗ್ರಿಪರ ತ್ರಿಸಂದಿಗ್ಧದೊಂದಿಗೆ ಹೊಂದಿಕೊಳ್ಳುತ್ತದೆ. ಸರಿಯಾದ ಆಧಾರವಿಲ್ಲದ ನಂಬಿಕೆಗಳ ವಿಷಯದಲ್ಲಿ – ಚಂದ್ರನನ್ನು ಗೋಲವೆಂದು ಭಾವಿಸಿದ ಮಗುವಿನ ನಂಬಿಕೆಯು ಸಮರ್ಥನೀಯವೆಂದು ಕರೆಯಲು ಅರ್ಹತೆಯನ್ನು ಪಡೆದಿರುವುದಿಲ್ಲ, ಇಂತಹ ದೃಷ್ಟಿಕೋನವು ಸಮಸ್ಯೆಯಂತೆ ಕಾಣಬಹುದು. ಮೂಲತತ್ತ್ವವಾದದ ಪ್ರಬಲವಾದ ರೂಪದ ಪ್ರಕಾರ, ಸ್ವಯಂ–ಸಮರ್ಥನೆವುಳ್ಳ ಕೆಲವು ನಂಬಿಕೆಗಳಿಗೆ ಬೇರೆ ಸಮರ್ಥನೆಯ ಅಗತ್ಯವಿಲ್ಲ. ಇಂತಹ ಮೂಲತತ್ತ್ವವಾದವನ್ನು ಅಭಿಜಾತ ಮೂಲತತ್ತ್ವವಾದವೆಂದು (Classical Foundationalism) ಕರೆಯುತ್ತಾರೆ. ಈ ತತ್ತ್ವದ ಪ್ರಕಾರ ಜ್ಞಾನದ ರಚನೆ ಹೇಗಿರುತ್ತದೆ ಎಂದರೆ, ಸಾಲುಗಟ್ಟಲೆ ಸಮರ್ಥನೆಗಳು ವಿಶೇಷವಾದ ಸ್ವಯಂ–ಸಮರ್ಥನೆಯುಳ್ಳ ಮೂಲತತ್ತ್ವದ ನಂಬಿಕೆಯಾಗಿ ಕೊನೆಗೊಳ್ಳುತ್ತವೆ ಮತ್ತು ಇಂತಹ ನಂಬಿಕೆಗಳಿಗೆ ಇತರ ಬೆಂಬಲಗಳ ಅಗತ್ಯವಿರುವುದಿಲ್ಲ.

ಡ ಕಾರ್ತ್ ಅವರು ಶ್ರೇಷ್ಠವಾದ ಮೂಲತತ್ತ್ವವಾದದ ಸುಪ್ರಸಿದ್ಧ ಪ್ರತಿಪಾದಕರಾಗಿದ್ದರು. ಇವರ ಬಗೆಗೆ ಹಿಂದಿನ ಅಧ್ಯಾಯದಲ್ಲಿ ಈಗಾಗಲೇ ನೋಡಿದ್ದೇವೆ. ಸಂಶಯಕ್ಕೆ ಅವಕಾಶವಿಲ್ಲದೆ ನಿಕರವೂ ಹಾಗೂ ಸ್ವಯಂಭಿವ್ಯಕ್ತವಾಗಿ ಸತ್ಯವೂ ಆಗಿರುವ ನಂಬಿಕೆಗಳು, ನಮ್ಮ ಜ್ಞಾನದ ಅಡಿಪಾಯಗಳಾಗಿವೆ ಎಂಬುದು ಡ ಕಾರ್ತ್ ಅವರ ವಾದವಾಗಿತ್ತು. ಒಬ್ಬ ವ್ಯಕ್ತಿಯು ತನ್ನ ಅಸ್ತಿತ್ವದ ಕುರಿತು ಹೊಂದಿದ ನಂಬಿಕೆಯೇ ಈ ತತ್ತ್ವಕ್ಕೆ ಅವರು ನೀಡಿದ ಉದಾಹರಣೆಯಾಗಿತ್ತು. ಈ ನಂಬಿಕೆಯು ಸಂದೇಹಾತೀತವಾದದ್ದೆಂದು ಡ ಕಾರ್ತ್‌ರವರು ವಾದಿಸಿದ್ದರು. ಏಕೆಂದರೆ, ಆತ ಇದರ ಕುರಿತು ಸಂಶಯ ವ್ಯಕ್ತಪಡಿಸುವಾಗ ತಾನು ಬದುಕಿದ್ದೇನೆಂಬುವುದನ್ನು ಸಾಬೀತುಪಡಿಸುವ ಮೂಲಕ ಇದನ್ನು ಸತ್ಯವೆಂದು ಸಾಬೀತು ಪಡಿಸುತ್ತಾನೆ. (ಒಬ್ಬ ವ್ಯಕ್ತಿ ತನ್ನ ಅಸ್ತಿತ್ವದ ಬಗೆಗೆ ಸಂಶಯ ವ್ಯಕ್ತಪಡಿಸುವುದೇ ಅವನ ಅಸ್ತಿತ್ವಕ್ಕೆ ಸಾಕ್ಷಿ; ತಾನು ಬದುಕಿಲ್ಲದೆ ಇದ್ದರೆ ತಾನು ಬದುಕಿದ್ದೇನೆಯೇ ಎಂದು ಸಂಶಯ ವ್ಯಕ್ತಪಡಿಸುವುದು ಹೇಗೆ ಸಾಧ್ಯ?) ಆದ್ದರಿಂದಲೇ ಇಂತಹ ನಂಬಿಕೆಗಳು ಸ್ವಯಂ–ಸಮರ್ಥನೆಯುಳ್ಳದ್ದಾಗಿರುತ್ತವೆ ಮತ್ತು ಇದಕ್ಕೆ ಹೆಚ್ಚಿನ ಸಮರ್ಥನೆಗಳ ಅಗತ್ಯವಿರುವುದಿಲ್ಲ. ಹೀಗೆ ಪ್ರತಿಪಾದಿಸುವ ನಂಬಿಕೆಯು ವಿಶ್ವಾಸಾರ್ಹವೂ ಹಾಗೂ ದೋಷತೀತವೂ ಆಗಿದ್ದು ಈ ತತ್ತ್ವವು ತಪ್ಪಾಗುವ ಸಾಧ್ಯತೆಯೇ ಕಡಿಮೆ. ಇದು ಸರಿಯಾಗಿದ್ದರೆ, ಈ ನಂಬಿಕೆಯಾಗಿ ಕೊನೆಗೊಂಡ ಸಾಲುಗಟ್ಟಲೆ ಸಮರ್ಥನೆಗಳು, ಇಲ್ಲಿಗೆ ಬಂದು ಮುಕ್ತಾಯ ಕಾಣಬಹುದು.

************************

## ರೆನೆ ಡ ಕಾರ್ತ್ (1596-1650)

ನಾನು ಯೋಚಿಸುತ್ತೇನೆ, ಆದ್ದರಿಂದಲೇ ನಾನು ಇದ್ದೇನೆ.

ಡ ಕಾರ್ತ್, Discourse on Method (ವಿಧಾನ ವನ್ನು ಕುರಿತು ವ್ಯಾಖ್ಯಾನ)

ರೆನೆ ಡ ಕಾರ್ತ್ ಫ್ರೆಂಚ್ ತತ್ತ್ವಶಾಸ್ತ್ರಜ್ಞ ಹಾಗೂ ಗಣಿತಜ್ಞರಾಗಿದ್ದರು. ಆಧುನಿಕ ತತ್ತ್ವಶಾಸ್ತ್ರದ ಪಿತಾಮಹರಲ್ಲಿ ರೆನೆ ಡ ಕಾರ್ತ್ ಒಬ್ಬರು. ಮೊದಲ ತತ್ತ್ವಶಾಸ್ತ್ರದ ಚಿಂತನೆ (Meditations on First Philosophy) ಇವರ ಪ್ರಸಿದ್ಧ ಕೃತಿಯಾಗಿದೆ. ಜ್ಞಾನಸಿದ್ಧಾಂತವನ್ನು ಅರ್ಥಮಾಡಿಕೊಳ್ಳಲು ಇವರೊಂದು ಆಮೂಲಾಗ್ರವಾದ ಹೊಸ ವಿಧಾನವನ್ನು ಸೂಚಿಸಿದ್ದರು.

ಸುಭದ್ರವಾದ ಅಡಿಪಾಯದ ಮೇಲೆ ನಮ್ಮ ಜ್ಞಾನವನ್ನು ಸ್ಥಾಪಿಸುವುದಕ್ಕಾಗಿ ನಾವು ನಂಬಿಕೆಯುಳ್ಳ ವಿಷಯವನ್ನು 'ಸಂಶಯದ ವಿಧಾನ'ಕ್ಕೆ ಒಳಪಡಿಸಬೇಕು. ಈ ಪ್ರಕ್ರಿಯೆಯಲ್ಲಿ ಒಬ್ಬನ ನಂಬಿಕೆಯ ಕುರಿತು ಸಾಧ್ಯವಿದ್ದಷ್ಟು ಸಂಶಯ ಪಡಬೇಕು ಮತ್ತು ಹೀಗೆ ಸಂದೇಹಿಸುತ್ತಾ ಸಂಶಯಾತೀತ ನೆಲೆಯನ್ನು ತಲುಪಬೇಕು. ಹೀಗೆ ಮಾಡುವುದರಿಂದ ಸಂಶಯರಹಿತವಾದ ಜ್ಞಾನಕ್ಕೆ ಜ್ಞಾನಸಿದ್ಧಾಂತವು ಬಲಿಷ್ಠವಾದ ಒಂದು ಅಡಿಪಾಯವಾಗುತ್ತದೆ ಮತ್ತು ಆಧಾರವಾಗುತ್ತದೆ. ಈ ದೃಷ್ಟಿಯಿಂದ ಡ ಕಾರ್ತ್ ಆಮೂಲಾಗ್ರವಾದ, ಸಂದೇಹದಿಂದ ಕೂಡಿದ್ದ, ಪೂರ್ವಸಿದ್ಧಾಂತಗಳನ್ನು ಮುಂದಿಟ್ಟರು. ಇವು

ಸಾಮಾನ್ಯ ಅನುಭವದಲ್ಲಿ ಗುರುತಿಸಲಾಗದ, ಆದರೆ ದೋಷಪೂರ್ಣವಾದ ಪ್ರಮೇಯಗಳಾಗಿರುತ್ತಿದ್ದವು. ಉದಾಹರಣೆಗೆ ಕನಸಿನ ಅನುಭವ.. ಇವು ಕನಸಿನ ಪರಿಣಾಮದ ರೂಪದ ಅನುಭವದಂತೆ ಆಮೂಲಾಗ್ರದಲ್ಲಿಯೇ ತಪ್ಪುಗಳನ್ನುಳ್ಳದ್ದಾಗಿದ್ದವು. ಹೀಗೆ ಮಾಡುವುದರಿಂದ ಸಂಶಯಕ್ಕೆ ಒಳಗಾಗದಂತಹ ನಂಬಿಕೆಗಳನ್ನು ಗುರುತಿಸುವುದು ಸಾಧ್ಯವಾಗಿತ್ತು. ಸಂಶಯ ವಿಧಾನವನ್ನು ಅಳವಡಿಸಿಕೊಂಡದ್ದರಿಂದ ನಮ್ಮ ಜ್ಞಾನದ ಸಂಶಯರಹಿತವಾದ ಮೂಲವೇ ನಮ್ಮ ಅಸ್ತಿತ್ವದ ನಂಬಿಕೆಯಾಗಿದೆ ಎಂದು ಡ ಕಾರ್ತ್ ನಿರ್ಧರಿಸಿದ್ದರು. ಏಕೆಂದರೆ, ನಮ್ಮ ಅಸ್ತಿತವನ್ನು ಕುರಿತು ಸಂಶಯ ವ್ಯಕ್ತಪಡಿಸುವುದೇ ನಮ್ಮ ಅಸ್ತಿತ್ವವನ್ನು ನಿಶ್ಚಯಿಸುತ್ತದೆ. (ನಾವೇ ಇಲ್ಲದಿದ್ದರೆ ಸಂಶಯ ವ್ಯಕ್ತಪಡಿಸುವುದು ಹೇಗೆ?) ಆದ್ದರಿಂದಲೇ, 'ನಾನು ಯೋಚಿಸುತ್ತೇನೆ, ಆದ್ದರಿಂದಲೇ ಇದ್ದೇನೆ' ಎಂಬುದು ಪ್ರಸಿದ್ಧವಾದ ಹೇಳಿಕೆಯಾಗಿದೆ.

ವ್ಯಂಗ್ಯವಾಗಿ ಹೇಳುವುದಾದರೆ, ಡ ಕಾರ್ತ್ ಆವಿಷ್ಕರಿಸಿದ ಬಲಿಷ್ಠವಾದ ಸಂಶಯಾತೀತವಾದ ವಾದಗಳು ಅವರು ಹೇಳಿದ ಸಂಶಯರಹಿತ ವಾದಗಳಿಗಿಂತ ಪ್ರಭಾವಯುತವಾಗಿದ್ದವು.. ಜ್ಞಾನದ ಸಾಧ್ಯತೆಯನ್ನು ಕುರಿತು ನಮ್ಮಲ್ಲಿ ಸಂಶಯ ಮೂಡಿಸುವುದು ಅವರ ಉದ್ದೇಶವಾಗಿರದಿದ್ದರೂ, ಜ್ಞಾನಮೀಮಾಂಸೆಯ ಅವರ ಶೋಧಗಳು ಇದನ್ನೇ ಸಾಧಿಸಿತ್ತು.

ಜ್ಞಾನಮೀಮಾಂಸೆಯ ಕ್ಷೇತ್ರದೊಂದಿಗೆ ಡ ಕಾರ್ತ್ ರವರು ತತ್ತ್ವಶಾಸ್ತ್ರದ ಎಲ್ಲಾ ಕ್ಷೇತ್ರಗಳಿಗೂ ವಿಶೇಷವಾದ ಕೊಡುಗೆಗಳನ್ನು ನೀಡಿದ್ದರು. ಇದರೊಂದಿಗೆ ಇವರು ವೈಜ್ಞಾನಿಕ ಹಾಗೂ ಗಣಿತಶಾಸ್ತ್ರಗಳ ಪ್ರಶ್ನೆಗಳ ಕುರಿತು ಸಂಶೋಧನೆಯನ್ನು ನಡೆಸಿ ರೇಖಾಗಣಿತದಂತಹ ಕ್ಷೇತ್ರಗಳಿಗೆ ದೀರ್ಘಕಾಲೀನ ಕೊಡುಗೆಗಳನ್ನೂ ನೀಡಿದ್ದರು.

***************************

ಅಭಿಜಾತ ಮೂಲತತ್ತ್ವವಾದವು ಎದುರಿಸುತ್ತಿರುವ ಮುಖ್ಯ ಸಮಸ್ಯೆ ಏನೆಂದರೆ ಮೂಲ ಆಧಾರಗಳ ಸ್ಥಾನ ಪಡೆಯಬಲ್ಲ, ಸ್ವಯಂ–ಸಮರ್ಥನೆವುಳ್ಳ ನಂಬಿಕೆಗಳನ್ನು ಗುರುತಿಸುವುದು; ಅಥವಾ ಅನುಚಿತವಾದ ನಿರ್ಬಂಧಗಳಿರದ ಮೂಲತತ್ತ್ವದ ನಂಬಿಕೆಗಳನ್ನು ಗುರುತಿಸುವುದಾಗಿದೆ. ನಮ್ಮ ಮೂಲತತ್ತ್ವವಾದಿಯಲ್ಲದ ನಂಬಿಕೆಗಳಿಗೆ ಮೂಲತತ್ತ್ವದ ನಂಬಿಕೆಗಳನ್ನು ಆಧಾರವೆಂದು ಸ್ವೀಕರಿಸಲು, ಮೂಲತತ್ತ್ವದ ನಂಬಿಕೆಗಳ ಮೇಲೆ ಕಟ್ಟುನಿಟ್ಟಾದ ನಿರ್ಬಂಧಗಳನ್ನು ಹೇರಬೇಕೆಂದು ಕಾಣಿಸುತ್ತದೆ. ಆದರೆ ಮೇಲಿನ ನಿರ್ಬಂಧಗಳು ಬಹಳ ಕಟ್ಟುನಿಟ್ಟಾಗಿದ್ದರೆ, ಬಹಳ ಕಡಿಮೆ ಸಂಖ್ಯೆಯಲ್ಲಿ ಮೂಲತತ್ತ್ವದ ನಂಬಿಕೆಗಳು ನಮ್ಮ ಪಾಲಿಗೆ ಸಿಗುತ್ತವೆ.

ಉದಾಹರಣೆಗೆ, ವಿಶ್ವಾಸಾರ್ಹತೆಯನ್ನು ತೋರಿಸಲು ಈ ವಾದವನ್ನು ಗಮನಿಸಿ. ನಮ್ಮ ಮೂಲ ನಂಬಿಕೆಗಳು ದೋಷರಹಿತವಾದವು. ಎಂದರೆ, ತಪ್ಪಾಗುವ ಸಾಧ್ಯತೆ ಇಲ್ಲದ ನಂಬಿಕೆಗಳು ಎಂದು ತಿಳಿದುಕೊಳ್ಳಿ. ಕೇವಲ ದೋಷಗಳಿಂದ ರಕ್ಷಣೆ ಪಡೆದಿರುವ ನಂಬಿಕೆಗಳು ಯಾವುದೇ ಸಮರ್ಥನೆಗಳ ಅಗತ್ಯವನ್ನು ಹೊಂದಿರುವುದಿಲ್ಲ. ವ್ಯಕ್ತಿಯೊಬ್ಬನ ದಿನನಿತ್ಯದ, ತಪ್ಪಾಗಿರಬಹುದಾದ ನಂಬಿಕೆಗಳನ್ನು ತಪ್ಪೇ ಆಗದಂತಹ ಮೂಲತತ್ತ್ವಕ್ಕೆ ಅನುಸಾರವಾಗಿರುವ ನಂಬಿಕೆಗಳೊಂದಿಗೆ ಹೊಂದಿಸಬಹುದಾದರೆ, ಮತ್ತು ಸಮರ್ಥನೆಗಳು ಹಿಂದಿನ ಘಟ್ಟಕ್ಕೆ ನಿವರ್ತಿಸುವುದಾದರೆ ಅದು ಸಮರ್ಥನೀಯವಾದ ನಂಬಿಕೆಗಳಾಗಿರುತ್ತವೆ.

ಆದರೆ, ದೋಷರಹಿತವಾದ ನಂಬಿಕೆಗಳು (ಇದ್ದಲ್ಲಿ) ಬಹಳ ಕಡಮೆ ಪ್ರಮಾಣದಲ್ಲಿವೆ. ನಮ್ಮ ದೈನಂದಿನ ನಂಬಿಕೆಗಳನ್ನು ಬೆಂಬಲಿಸಲು ಈ ಸಂಖ್ಯೆ ಸಾಕಾಗುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ೩ಕ್ಕೆ ೨ನ್ನು ಕೂಡಿಸಿದರೆ ೫ ಬರುತ್ತದೆ.. ಇದನ್ನು ಕುರಿತು ನನಗೆ ಯಾವುದೇ ಸಂದೇಹವಿಲ್ಲ ಎಂದು ತೋರಿಸಬಹುದು. ಏಕೆಂದರೆ, ಇದು ತಪಾಗುವ ಸಾಧ್ಯತೆಯೇ ಇಲ್ಲ (ಆದರೆ, ಚತುರತೆಯಿಂದ ಕೂಡಿದ ವಿಮರ್ಶೆಯ ಮೂಲಕ ಇದರ ಸ್ಪಷ್ಟತೆಯ ವಿಷಯದಲ್ಲಿ ಸಂಶಯವನ್ನು ತೋರಿಸಲು ಯತ್ನಿಸಬಹುದು). ಈ ನಂಬಿಕೆ ನಿಜವಾಗಿದ್ದರೂ, ಈ ಜಗತ್ತನ್ನು ಕುರಿತು ನನ್ನ ಇತರ ಎಲ್ಲಾ ನಂಬಿಕೆಗಳನ್ನು ನಿಜವೆಂದು ಈ ನಂಬಿಕೆಯು ಹೇಗೆ ಸಮರ್ಥಿಸಲು ಸಾಧ್ಯ? ಉದಾಹರಣೆಗೆ, ನಾನೀಗ ನನ್ನ ಮೇಜಿನ ಎದುರಿನಲ್ಲಿ ಕುಳಿತಿದ್ದೇನೆ. ಈ ನಂಬಿಕೆಯು ಗಣಿತಶಾಸ್ತ್ರದೊಂದಿಗೆ ಯಾವುದೇ ಸಂಬಂಧ ಹೊಂದದೇ ಇರುವ ಕಾರಣ, ಇದು ಪ್ರಪಂಚವನ್ನು ಕುರಿತ ಸಮರ್ಥನೆಯಾಗಲು ಸಾಧ್ಯವಿಲ್ಲ.

ಅಸ್ತಿತ್ವವನ್ನು ಕುರಿತು ಡ ಕಾರ್ತ್ ಅವರ ಅಭಿಜಾತ ಮೂಲತತ್ತ್ವವಾದದ ಬಗೆಗೂ ಇದನ್ನೇ ಹೇಳಬಹುದು. . ಜಗತ್ತನ್ನು ಕುರಿತು ನಾನು ಹೊಂದಿರುವ ಅನಂತ ನಂಬಿಕೆಗಳು ಇಂತಹ ಒಂದು ನಿರ್ದಿಷ್ಟವಾದ ಮತ್ತು ಕಿರಿದಾದ ನಂಬಿಕೆಯನ್ನು ಹೇಗೆ ಅವಲಂಬಿಸಿರುತ್ತವೆ? ಈ ಸಮಸ್ಯೆಯನ್ನು ಪರಿಹರಿಸಲು ಇರುವ ಒಂದು ವಿಧಾನದಲ್ಲಿ ಮೂಲ ಆಧಾರದ ನಂಬಿಕೆಗಳ ಅಗತ್ಯಗಳನ್ನು ಕಡಿಮೆ ಮಾಡುವುದಾಗಿದೆ. ಹೀಗೆ ಮಾಡುವುದರಿಂದ ನಂಬಿಕೆಗಳು ದೋಷವುಳ್ಳವು ಎಂದು ಹೇಳಬಹುದು. ಉದಾಹರಣೆಗೆ, ಪ್ರಸ್ತುತದಲ್ಲಿ ನಡೆದ ಅನುಭವವನ್ನು ಕುರಿತು ಒಬ್ಬ ವ್ಯಕ್ತಿಯ ನಂಬಿಕೆ – ಅಥವಾ, ನಿಮಗೆ ಜಗತ್ತು ಹೇಗೆ ಕಾಣುತ್ತದೆ – ಇವನ್ನು ಮೂಲ ನಂಬಿಕೆಗಳೆಂದು ಪರಿಗಣಿಸಬಹುದು. ಆದರೆ, ಇಲ್ಲಿ ಎದುರಾಗುವ ಸಮಸ್ಯೆ ಏನೆಂದರೆ, ಇಂತಹ ಯಾವುದಾದರೊಂದು ನಂಬಿಕೆಯನ್ನು ಮೂಲವೆಂದು ಸ್ವೀಕರಿಸಲು ಇರುವ ಕಾರಣಗಳನ್ನು ವಿವರಿಸುವುದು (ಇಂತಹ ನಂಬಿಕೆಗಳು ದೋಷರಹಿತವಾಗಿರಬೇಕೆಂದೇನಿಲ್ಲ). ಎಂದರೆ, ಇಲ್ಲಿ ನಾವು ಅಹಿತಕರವೆನಿಸುವ ಎರಡು ಆಯ್ಕೆಗಳ ನಡುವೆ ಸಿಕ್ಕಿ ಬಿದ್ದ ಹಾಗಿದೆ. ನಾವು ಮೂಲಭೂತ ನಂಬಿಕೆಗಳ ಅಗತ್ಯಗಳನ್ನು ಉನ್ನತ ಮಟ್ಟದಲ್ಲಿ ಇರಿಸುವ ಮೂಲಕ ಅದರ ಸತ್ಯಾಸತ್ಯತೆಯನ್ನು ತೋರಿಸುವುದು ಒಂದು ಆಯ್ಕೆಯಾಗಿದೆ. ಆದರೆ ಇಲ್ಲಿ ಮೂಲ ಆಧಾರವೆನಿಸದೇ ಇರುವ ನಂಬಿಕೆಗಳಿಗೆಲ್ಲ ಈ ಒಂದು ನಂಬಿಕೆ ಹೇಗೆ ಮೂಲ ಆಧಾರವಾಗಿದೆ ಎಂದು ವಿವರಿಸಬೇಕಾದ ಸಮಸ್ಯೆಯನ್ನು ಎದುರಿಸುತ್ತದೆ. ಅಥವಾ, ಮೂಲಭೂತ ನಂಬಿಕೆಯ ಮೇಲಿನ ಅಗತ್ಯಗಳನ್ನು ಕಡಿಮೆ ಮಾಡುವುದು ಎರಡನೆಯ ಆಯ್ಕೆ. ಆದರೆ, ಕಡಿಮೆ ಅಗತ್ಯಗಳ ನಂಬಿಕೆಯನ್ನು ಮೂಲ ಆಧಾರವನ್ನಾಗಿ ಸ್ವೀಕರಿಸಿದ ಕಾರಣವನ್ನು ವಿವರಿಸುವುದು ಇಲ್ಲಿನ ಸಮಸ್ಯೆಯಾಗಿದೆ.

ಅಗ್ರಿಪರ ತ್ರಿಸಂಧಿಗ್ಧ ತಂದೊಡ್ಡಿರುವ ಸಮಸ್ಯೆಯನ್ನು ಮೂಲತತ್ತ್ವವಾದದ ರೂಪದಲ್ಲಿ ಪರಿಗಣಿಸಬೇಕೇ ಅಥವಾ ಈ ಸಮಸ್ಯೆಗೆ ಇರುವ ಇತರ ನಿಯಮಿತವಾದ ಪ್ರತಿಕ್ರಿಯೆಗಳಾದ ಸುಸಂಬದ್ಧತೆ ಅಥವಾ ಅನಂತತೆಗಳ ಮುಖಾಂತರ ಪರಿಹಾರ ತಿಳಿಯಬೇಕೇ ಎಂಬುದು ಇಲ್ಲಿಯೂ ಸ್ಪಷ್ಟವಾಗಿ ತಿಳಿದು ಬರುವುದಿಲ್ಲ.

ಅಧ್ಯಾಯದ ಸಾರಾಂಶ

• ಆರಂಭದಲ್ಲಿ, ಜ್ಞಾನವನ್ನು ಪಡೆಯಬೇಕೆಂದರೆ ನಮ್ಮ ನಂಬಿಕೆಯನ್ನು ಸಮರ್ಥಿಸಬೇಕೆಂಬುದನ್ನು ಅಂತರ್ಬೋಧೆಯಿಂದ ನಾವು ಗಮನಿಸಿದೆವು. ಆದ್ದರಿಂದಲೇ ಸಮರ್ಥನೆ ಎಂದರೆ ಏನು ಎಂದು ಪ್ರಶ್ನಿಸಿದೆವು.

• ಅಗ್ರಿಪರ ತ್ರಿಸಂಧಿಗ್ಧದ ಪ್ರಕಾರ, ಇದಕ್ಕೆ ಮೂರು ಪರ್ಯಾಯಗಳು ಮಾತ್ರ ಇವೆ. ಮೊದಲ ನೋಟದಲ್ಲಿ ಯಾವುದೂ ಆಕರ್ಷಕವಾಗಿ ಕಾಣುವುದಿಲ್ಲ. ಮೊದಲನೆಯ ಪರ್ಯಾಯದಲ್ಲಿ ಒಂದು ನಂಬಿಕೆಯನ್ನು ಯಾವುದೇ ಸಮರ್ಥನೆಗಳಿಲ್ಲದಿರುವುದೆಂದು ಸ್ವೀಕರಿಸಲಾಗಿದೆ. ಯಾವುದೇ ಬೆಂಬಲಗಳಿಲ್ಲದ ನಂಬಿಕೆಯನ್ನು ಹೇಗೆ ಸಮರ್ಥಿಸಬಹುದು ಎಂಬುದು ಇಲ್ಲಿನ ಸಮಸ್ಯೆಯಾಗಿದೆ. (ಇದನ್ನು ವಿವರಿಸಲು ಒಂದು ಮನೆಯ ಉದಾಹರಣೆಯನ್ನು ಬಳಸಿಕೊಳ್ಳಲಾಗಿತ್ತು. ತಳಪಾಯವಿಲ್ಲದ ಮನೆ ನಿಲ್ಲುವುದಿಲ್ಲ.) ಎರಡನೆಯ ಪರ್ಯಾಯದಲ್ಲಿ ಒಂದು ನಂಬಿಕೆಯು ಇನ್ನೊಂದು ನಂಬಿಕೆಯಿಂದ ಸಮರ್ಥಿಸಲ್ಪಡುತ್ತದೆ. . ಸಮರ್ಥನೆ ನೀಡುವ ನಂಬಿಕೆಗೆ ಬೇರೊಂದು ಸಮರ್ಥನೆಯ ಅಗತ್ಯವಿರುವುದರಿಂದ, ಮೊದಲ ನಂಬಿಕೆಯು ಸಮರ್ಥನೆಯಿಲ್ಲದ ನಂಬಿಕೆಯನ್ನು ಆಧರಿಸುವಾಗ, ಮೊದಲ ನಂಬಿಕೆಯ ಬೆಂಬಲ ಕಡಿಮೆ ಆಗುವುದು. ಇದು ಇಲ್ಲಿ ಎದುರಾಗುವ ಸಮಸ್ಯೆ. ಆದರೆ, ಎರಡನೆಯ ನಂಬಿಕೆಯನ್ನು ಸಮರ್ಥಿಸಲು ಬೇರೊಂದು ನಂಬಿಕೆಯನ್ನು ಬಳಸಬೇಕಾಗುತ್ತದೆ. ಇದು ಹೀಗೆ ಕೊನೆಯಿಲ್ಲದಂತೆ ಮುಂದುವರಿಯುತ್ತದೆ. ಇದರಿಂದಾಗಿ ನಾವು ಹಿನ್ನಡೆಯನ್ನು ಅನುಭವಿಸುತ್ತೇವೆ. (ಇಲ್ಲಿ ಪುನಃ ಮನೆಯ ಉದಾಹರಣೆಯನ್ನು ತೆಗೆದುಕೊಳ್ಳಲಾಗಿತ್ತು. ಅನಂತ ತಳಪಾಯಗಳುಳ್ಳ ಮನೆಯೂ ನಿಲ್ಲುವುದಿಲ್ಲ.) ಮೂರನೆಯ ಆಯ್ಕೆಯಲ್ಲಿ, ಸಮರ್ಥನೆಗಳ ಸಾಲಿನಲ್ಲಿ ಬರುವ ಬೆಂಬಲಗಳನ್ನು ಆ ಸರಣಿಯಲ್ಲಿ ಈಗಾಗಲೇ ಕಂಡುಬಂದ ನಂಬಿಕೆಗಳಾಗಿರಲು ಅವಕಾಶ ಕೊಡುವುದು. ಈ ಆಯ್ಕೆಯು ಸಮರ್ಥನೆಗಳ ಪುನರಾವರ್ತನೆಗೆ ಅವಕಾಶ ಮಾಡಿಕೊಡುತ್ತದೆ. ಈ ಆಯ್ಕೆಯೂ ಆಕರ್ಷಕವಾಗಿಲ್ಲ. ಆದರೆ, ಪುನರಾವರ್ತನೆಯಾಗುವ ಸಾಲುಗಟ್ಟಲೆ ಸಮರ್ಥನೆಗಳು, ಸಮರ್ಥನೆ ಇಲ್ಲದಿರುವುದಕ್ಕಿಂತ ಉತ್ತಮವೆನಿಸುತ್ತದೆ. (ಮನೆಯ ಉದಾಹರಣೆಯನ್ನು ನೋಡಿದಾಗ, ಸಾಲುಗಟ್ಟಲೆ ತಳಪಾಯಗಳಿರುವ ಮನೆಗೆ ಹೋಲಿಸಿದರೆ, ತಳಪಾಯಗಳನ್ನು ಎತ್ತಿ ಹಿಡಿಯುವ ತಳಪಾಯವಿಲ್ಲದ ಮನೆಯು ನಿಲ್ಲುವುದಿಲ್ಲ.) ಯಾವುದೇ ನಂಬಿಕೆಯನ್ನು ಹೇಗೆ ಸಮರ್ಥಿಸಬಹುದು ಎಂದು ಅರ್ಥಮಾಡಿಕೊಳ್ಳುವುದು ಕಷ್ಟವಾಗುತ್ತದೆ.

• ಅಗ್ರಿಪರ ತ್ರಿಸಂಧಿಗ್ಧಕ್ಕೆ ನಾವು ಮೂರು ಪ್ರತಿಕ್ರಿಯೆಗಳನ್ನು ಪರಿಗಣಿಸಿದೆವು. ಮೇಲೆ ತಿಳಿಸಿದಂತೆ ಅಹಿತಕರವೆನಿಸುವ ಆಯ್ಕೆಗಳನ್ನು ಈ ಮೂರು ಪರ್ಯಾಯಗಳು ಹೊಂದಿಕೊಂಡಿವೆ. ಮೊದಲ ಆಯ್ಕೆಯು ಅನಂತತೆ. ಈ ಸಿದ್ಧಾಂತವು ಹೇಳುವುದೇನೆಂದರೆ, ಒಂದು ನಂಬಿಕೆಯು ಅನಂತ ಸಮರ್ಥನೆಗಳ ಸಾಲಿನಿಂದ ಸಮರ್ಥನೆಯನ್ನು ಪಡೆಯುತ್ತದೆ.

• ಎರಡನೆಯ ಆಯ್ಕೆ ಸುಸಂಬದ್ಧತೆ. ಇದನ್ನು ಕ್ವೈನ್ ಅವರು ಬೆಂಬಲಿಸಿದ್ದರು. ಸಾಲುಗಟ್ಟಲೆ ಬೆಂಬಲಗಳು ವೃತ್ತಾಕಾರದಲ್ಲಿದ್ದು, ಎಲ್ಲಾ ಹಂತಗಳಲ್ಲಿ ಸರಿಯಾದ ಗುಣಗಳನ್ನು ಹೊಂದಿದ್ದರೆ (ಉದಾ: ಸಾಕಷ್ಟು ದೊಡ್ಡದಿದ್ದರೆ), ಇಂತಹ ಬೆಂಬಲಗಳು ಒಂದು ನಂಬಿಕೆಯನ್ನು ಸಮರ್ಥಿಸಬಲ್ಲವು.

• ಕೊನೆಯದಾಗಿ, ಮೂಲತತ್ತ್ವವಾದ ಮತ್ತು ವಿಶೇಷವಾಗಿ, ಅಭಿಜಾತ ಮೂಲತತ್ತ್ವವಾದಗಳನ್ನು ನೋಡಿದೆವು. ಡ ಕಾರ್ಟ್ ಅವರು ಇವನ್ನು ಸಮರ್ಥಿಸಿದ್ದರು. ಈ ತತ್ತ್ವದ ಪ್ರಕಾರ ಕೆಲವು ನಂಬಿಕೆಗಳು ಯಾವುದೇ ಸಮರ್ಥನೆಯನ್ನು ಅವಲಂಬಿಸಿರುವುದಿಲ್ಲ. ಹೀಗಿರುವುದರಿಂದ ಇವು ತಮ್ಮನ್ನು ಅವಲಂಬಿಸಿದ ನಂಬಿಕೆಗಳಿಗೆ ಆಧಾರವೆನಿಸುತ್ತವೆ. ಅಭಿಜಾತ ಮೂಲತತ್ತ್ವದ ವಿಶಿಷ್ಟವಾದ ಗುಣವೇನೆಂದರೆ, ಮೂಲತತ್ತ್ವದ ನಂಬಿಕೆಗಳು ಸ್ವಯಂ–ಸಮರ್ಥನೆಯುಳ್ಳಂತಹವು – ಎಂದರೆ ಸಂಶಯರಹಿತವಾದವು ಅಥವಾ ದೋಷರಹಿತವಾಗಿ ಸ್ವೀಕರಿಸಲು ಯೋಗ್ಯವಾದವು. ಈ ಮೂಲ ನಂಬಿಕೆಗಳನ್ನು ಸಂಶಯರಹಿತ ಅಥವಾ ದೋಷರಹಿತವೆಂದು ನಿರ್ಧರಿಸುವುದು ಹೇಗೆ ಮತ್ತು ಇದರೊಂದಿಗೆ ನಮ್ಮ ಹಲವಾರು ನಂಬಿಕೆಗಳಿಗೆ ಮೂಲ ಆಧಾರವಾಗಿ ನಮ್ಮ ಇತರ ನಂಬಿಕೆಗಳನ್ನು ಇದು ಹೇಗೆ ಬೆಂಬಲಿಸುತ್ತದೆ ಎನ್ನುವುದನ್ನು ವಿವರಿಸುವುದು ಈ ತತ್ತ್ವದ ಸಮಸ್ಯೆಯಾಗಿದೆ.

**ಅಧ್ಯಯನ ಪ್ರಶ್ನೆಗಳು**

೧. ಅಗ್ರಿಪರ ತ್ರಿಸಂದಿಗ್ಧವನ್ನು, ನಿಮ್ಮ ಮಾತುಗಳಲ್ಲಿ ವಿವರಿಸಿ. ನಿಮಗೆ ಸ್ವೀಕಾರಾರ್ಹವೆನಿಸುವ ನಿಮ್ಮದೇ ಆದ ಒಂದು ನಂಬಿಕೆಯನ್ನು ಆಯ್ದುಕೊಂಡು ಅಗ್ರಿಪರ ಟ್ರೈಲೆಮ್ಮವನ್ನು ಬಳಸಿಕೊಂಡು ಅದನ್ನು ಪ್ರಶ್ನಿಸಿ. (ನಿಮ್ಮ ಸ್ನೇಹಿತನೊಂದಿಗೆ ಮಾಡಿದರೆ, ಈ ಪ್ರಯತ್ನವು ಹೆಚ್ಚು ಫಲಕಾರಿಯಾಗಬಹುದು.)

೨. ಅನಂತತೆ ಎಂದರೇನು? ಅಗ್ರಿಪರ ತ್ರಿಸಂದಿಗ್ಧಗಳನ್ನು ಕುರಿತು ಈ ತತ್ತ್ವ ಹೇಗೆ ಪ್ರತಿಕ್ರಿಯೆ ನೀಡುತ್ತದೆ? ಅದರಲ್ಲಿ ಏನಾದರೂ ನ್ಯೂನತೆ ಇದ್ದರೆ, ಹೇಗೆ ಮುಂದುವರಿಯುವುದು?

೩. ಸುಸಂಬದ್ಧತೆ ಎಂದರೆ ಏನು? ಅಗ್ರಿಪರ ತ್ರಿಸಂದಿಗ್ಧವನ್ನು ಕುರಿತು ಈ ತತ್ತ್ವ ಹೇಗೆ ಪ್ರತಿಕ್ರಿಯೆ ನೀಡುತ್ತದೆ? ನಮ್ಮ ನಂಬಿಕೆಗಳನ್ನು ಸಮರ್ಥಿಸಲು ಸಹಕರಿಸುವ ಅತ್ಯುತ್ತಮವಾದ ವಿವರಣೆಯನ್ನು ಸುಸಂಬದ್ಧತೆಯು ನೀಡುತ್ತದೆ ಎಂಬ ಈ ತತ್ತ್ವದ ಅನುಯಾಯಿಗಳ ಹೇಳಿಕೆಯನ್ನು

ಕುರಿತು ನಿಮ್ಮ ಪ್ರತಿಕ್ರಿಯೆ ಏನು? ಈ ಹೇಳಿಕೆ ಸರಿಯಾಗಿದೆಯೇ? ಇದು ಸರಿಯಾಗಿದ್ದಲ್ಲಿ, ಸುಸಂಬದ್ಧತೆಯ ಸರಿ ಅಥವಾ ತಪ್ಪಾಗಿರುವಿಕೆಗೆ ಈ ತತ್ತ್ವವು ಪ್ರಸ್ತುತವಾಗಿದೆಯೆ?

೪. ಮೂಲತತ್ತ್ವವಾದ ಎಂದರೆ ಏನು? ಅಗ್ರಿಪರ ತ್ರಿಸಂದಿಗ್ಧಕ್ಕೆ ಈ ತತ್ತ್ವ ಹೇಗೆ ಪ್ರತಿಕ್ರಿಯೆ ನೀಡುತ್ತದೆ? ಅಭಿಜಾತ ಮೂಲತತ್ತ್ವವಾದದ ಅನುಸಾರ ಈ ತತ್ತ್ವದ ನಂಬಿಕೆಗಳು ಯಾವುವು ಎಂದು ನಿಮ್ಮದೇ ಮಾತುಗಳಲ್ಲಿ ವಿವರಿಸಿ. ಈ ಲಕ್ಷಣಗಳನ್ನು ಮೂರು ನಂಬಿಕೆಗಳನ್ನು ಉದಾಹರಣೆಯ ರೂಪದಲ್ಲಿ ವಿವರಿಸಿ.

೫. ಸ್ವಂತ ಅಸ್ತಿತ್ವವನ್ನು .........ಕುರಿತು ಇರುವ ನಂಬಿಕೆಯನ್ನು ಡ ಕಾರ್ತ್ ಒಂದು ಮೂಲಭೂತ ನಂಬಿಕೆ ಎಂದು ತಿಳಿಯಲು ಕಾರಣವೇನು? ಈ ವಿಧದ ಮೂಲಭೂತ ನಂಬಿಕೆಗಳು ಜಗತ್ತನ್ನು ಕುರಿತು ಇರುವ ನಂಬಿಕೆಗಳಿಗೆ ಬೆಂಬಲ ನೀಡಬಲ್ಲವೆ? ಹೌದು ಎಂದಾದಲ್ಲಿ, ಅದನ್ನು ವಿವರಿಸಿ. ಇಲ್ಲ ಎಂದಾದರೆ, ಏಕೆ ಎಂಬುದನ್ನು ತಿಳಿಸಿ.

## ANNOTATED FURTHER READING

Bailey, Alan (2002) Sextus Empiricus and Pyrrhonian Scepticism (Oxford: Oxford University Press). A recent and lively treatment of Pyrrhonian scepticism.

Bonjour, Laurence (1985) *The Structure of Empirical Knowledge* (Cambridge, Mass.: Harvard University Press). Perhaps the most famous and comprehensive defence of coherentism in recent times. Note, however, that Bonjour has since recanted and now advances a form of foundationalism.

### **What is knowledge**?

Chisholm, Roderick (1989) *The Theory of Knowledge* (Englewood Cliffs, N.J.: Prentice-Hall). A classic textbook in epistemology which also contains an influential defence of a version of classical foundationalism.

Hookway, Christopher (1988) *Quine: Language, Experience and Reality* (Oxford: Polity Press). A classic book introducing the philosophy of W. V. O. Quine.

Klein, Peter (1998) '*Foundationalism and the Infinite Regress of Reasons', Philosophy and Phenomenological Research* 58, 919–25. A recent defence of infinitism. Not for beginners.

Williams, Bernard (1978) Descartes: *The Project of Pure Inquiry* (Harmondsworth: Penguin). A classic introduction to the philosophy of Descartes, paying particular attention to his epistemology.

Williams, Michael (2001) *Problems of Knowledge* (Oxford: Oxford University Press). See chapter 5 for an excellent introduction to Agrippa's trilemma and some of the issues that it raises.

## *INTERNET RESOURCES*

Groake, Leo (2003) 'Ancient Skepticism', *Stanford Encyclopedia of Philosophy,* <http://plato. stanford.edu/entries/skepticism-ancient/>. An excellent overview of ancient scepticism, including discussion of the style of scepticism, known as Pyrrhonian scepticism, which was advocated by Agrippa, and discussion of Agrippa's trilemma. Marginally better than the internet entry written by Thorsrud (see below).

Klein, Peter (2005) ‘Skepticism’, *Stanford Encyclopedia of Philosophy*, <http://plato.stanford.edu/entries/skepticism/>. See §§7–11 for an excellent overview of Pyrrhonian scepticism – and of Agrippa’s trilemma in particular – and some of the main responses.

Newman, Lex (2005) ‘Descartes’ Epistemology’, *Stanford Encyclopedia of Philosophy*, <http://plato.stanford.edu/entries/descartes-epistemology/>. Helpful introduction to the epistemological ramifications of Descartes’ epistemology.

Thorsrud, Harold (2004) ‘Ancient Greek Skepticism’, *Internet Encyclopedia of Philosophy*, <http://www.iep.utm.edu/s/skepanci.htm>. An excellent overview of ancient scepticism, including discussion of the style of scepticism, known as Pyrrhonian scepticism, which was advocated by Agrippa, and discussion of Agrippa’s trilemma. See especially §3. Note that the internet entry written by Groake (see above) is marginally better.